C.R.P.67 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

Form No.4 (Civil) Depositions sheets R.P.No.57

ಎಸ್.ಸಿ. ಸಂಖ್ಯೆ 78/2019

ಪ್ರಾ ಸಾ 3 ಚಾ ಸಾ 2

| | |
|---|---|
| ಸಾಕ್ಷಿಯ ಹೆಸರು | ರಾಚೇಗೌಡ |
| ತಂದೆಯ ಹೆಸರು | ರಾಚೇಗೌಡ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೆಂಚನದೊಡ್ಡಿ ಗ್ರಾಮ |

ಸಾಕ್ಷಿದಾರರಿಗೆ ದಿನಾಂಕ 26.12.2019 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ಪ್ರಾ ಸಾ 1 ದಿವ್ಯ ನನ್ನ ಮಗಳು. ಚಾಸಾ 3 ನನ್ನ ಹೆಂಡತಿ. ಚಾಸಾ 11 ಮತ್ತು 12 ನನ್ನ ಸಂಬಂಧಿಕರು. ಚಾಸಾ 20 ಮತ್ತು 21 1 ನೇ ಆರೋಪಿಯ ಬಾವ ಮತ್ತು ಅಕ್ಕ. ನನಗೆ 3 ಜನ ಮಕ್ಕಳು. ರಾಜಶೇಖರ ಎಂಬುವವನು ಹಿರಿಯ ಮಗ, ಭವ್ಯ 2 ನೇ ಮಗಳು, 3 ನೇಯಳು ಪ್ರಾ ಸಾ 1. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ 2 ಎಕರೆ ಜಮೀನು ಇರುತ್ತದೆ. ಅದರಲ್ಲಿ ರಾಗಿ ಮತ್ತು ಹುರುಳಿ ಬೆಳೆಯುತ್ತೇನೆ.

2. 1 ನೇ ಆರೋಪಿ ಜೊತೆ ಪ್ರಾ ಸಾ 1 ರವರನ್ನು ಮದುವೆ ಮಾಡಿ 9 ವರ್ಷ ಆಗಿರುತ್ತದೆ. ನನ್ನ ಮಗಳ ಮದುವೆಯ ಮಾತುಕತೆಯು, ಮದುವೆಯ 8 ದಿನ ಮುಂಚೆ ಚಾಸಾ 11 ಮತ್ತು 12 ರವರ ಮನೆಯಲ್ಲಿ ನಡೆದಿತ್ತು. ಮದುವೆಯ ಮಾತುಕತೆಗೆ 1 ನೇ ಆರೋಪಿ ಕಡೆಯಿಂದ ಆತನ ತಂದೆ, ನೆಲಮಾಕನಹಳ್ಳಿ ಗ್ರಾಮದ ಮರಿಸ್ವಾಮಿ ಮತ್ತು ನಾಗಲಿಂಗೇಗೌಡ ಮತ್ತು ಇತರರು ಬಂದಿದ್ದರು. ನಮ್ಮ ಪರವಾಗಿ ನಾನು ಒಬ್ಬನೇ ಇದ್ದೆ. ನನ್ನ ಸಂಬಂಧಿಕರು ಯಾರು ಇರಲಿಲ್ಲ. ಮದುವೆಯ ಮಾತುಕತೆಯಲ್ಲಿ 1 ನೇ ಆರೋಪಿಯ ತಂದೆ 200 ಗ್ರಾಂ ಚಿನ್ನ ಮತ್ತು ಒಂದು ಸ್ಕೂಟರ್ ಗೆ ದುಡ್ಡು ಕೇಳಿದರು. ಅಲ್ಲಿ ಸೇರಿದ ಯಜಮಾನರುಗಳು ಹುಡುಗನಿಗೆ ಕತ್ತಿಗೆ ಚೈನು, ಉಂಗುರ, ಛತ್ರದಲ್ಲಿ ಮದುವೆ, ಮತ್ತು ಗಾಡಿ ತೆಗೆದುಕೊಳ್ಳಲು 50 ಸಾವಿರ ದುಡ್ಡು ಕೊಡಬೇಕೆಂದು ತೀರ್ಮಾನ

ಮಾಡಿದರು. ಅದರಂತೆ ನಾವು 1 ನೇ ಆರೋಪಿಗೆ ವರದಕ್ಷಿಣೆ ಕೊಟ್ಟು ಕೆ ಎಂ ದೊಡ್ಡಿಯಲ್ಲಿರುವ ಬಾಲಾಜಿ ಛತ್ರದಲ್ಲಿ ಮದುವೆ ಮಾಡಿಕೊಟ್ಟೆವು ಮದುವೆಯಲ್ಲಿ ನಾವು ನನ್ನ ಮಗಳು ಪ್ರಾ ಸಾ 1 ರವರಿಗೆ ಚಿನ್ನದ ಮಾಂಗಲ್ಯ ಸರ, ಒಂದು ಲಾಂಗ್ ಸರ, ಒಂದು ನೆಕ್ಲೇಸು, ಎರಡು ಬಳೆ ಕೊಟ್ಟಿರುತ್ತೇವೆ. ಮದುವೆಯಾದ ನಂತರ ನನ್ನ ಮಗಳು ಪ್ರಾ ಸಾ 1 ರವರು ಆರೋಪಿಗಳ ಮನೆಯಲ್ಲಿ ವಾಸ ಮಾಡಿಕೊಂಡಿದ್ದಳು. ಆರೋಪಿಗಳ ಮನೆಯಲ್ಲಿ 1 ನೇ ಆರೋಪಿ, ಆತನ ತಂದೆ ತಾಯಿ ಮತ್ತು ಆತನ ಅಕ್ಕ ರೇಖಾ ವಾಸ ಮಾಡಿಕೊಂಡಿದ್ದರು. 1 ನೇ ಆರೋಪಿಯ ಅಕ್ಕನಿಗೆ ಮದುವೆಯಾಗಿತ್ತು. ಮದುವೆಯಾಗಿ ಎಷ್ಟು ವರ್ಷ ಆಗಿತ್ತು ಮತ್ತು ಯಾವ ಊರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದು ಗೊತ್ತಿಲ್ಲ. 1 ನೇ ಆರೋಪಿ ಕಾಗೇಪುರ ಗ್ರಾಮದಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದ. 2 ನೇ ಆರೋಪಿ ಮನೆಯಲ್ಲಿ ಇದ್ದರು ಮತ್ತು 1 ನೇ ಆರೋಪಿಯ ತಂದೆ ಏನು ಕೆಲಸ ಮಾಡುತ್ತಿರಲಿಲ್ಲ. ಆರೋಪಿತರಿಗೆ ಜಮೀನು ಸಹ ಇರುತ್ತದೆ. 3 – 4 ವರ್ಷದ ಹಿಂದೆ 1 ನೇ ಆರೋಪಿಯ ತಂದೆ ಮೃತಪಟ್ಟಿರುತ್ತಾರೆ.

3. ಮದುವೆಯಾದ 2 ವರ್ಷಗಳು ನನ್ನ ಮಗಳ ಸಂಸಾರ ಚೆನ್ನಾಗಿತ್ತು. ಮದುವೆಯಾದ ಒಂದು ವರ್ಷದ ನಂತರ ನನ್ನ ಮಗಳು ಪ್ರಾ ಸಾ 1 ರವರಿಗೆ ಒಂದು ಗಂಡು ಮಗು ಜನಿಸಿರುತ್ತದೆ. ಹೆರಿಗೆಯಾದ ನಂತರ 9 ತಿಂಗಳಿಗೆ ನನ್ನ ಮಗಳು ಪ್ರಾ ಸಾ 1 ರವರನ್ನು ಆರೋಪಿತರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದೆ. ಮೊಮ್ಮಗನನ್ನು ಆರೋಪಿತರ ಮನೆಯಲ್ಲಿ ಬಿಡುವಾಗ ಮೊಮ್ಮಗನಿಗೆ 10 ಗ್ರಾಂ ಚಿನ್ನದ ಚೈನು, ಎರಡೂವರೆ ಗ್ರಾಂ ತೂಕದ ಎರಡು ಉಂಗುರಗಳನ್ನು ಕೊಟ್ಟಿದ್ದೆನು. ಆದಾದ ಒಂದು ವರ್ಷಗಳ ಕಾಲ ಅವರ ಸಂಸಾರ ಚೆನ್ನಾಗಿತ್ತು. ನಂತರ 1 ನೇ ಆರೋಪಿ ಮತ್ತು ಆತನ ತಂದೆ ನಾನು ಆರೋಪಿತರ ಮನೆಗೆ ಹೋಗಿದ್ದಾಗ ಅವರುಗಳು ನೀವು ಕೊಟ್ಟಿರುವ ಒಡವೆಗಳು ಸಾಕಾಗುವುದಿಲ್ಲ, ನೀವು ಇನ್ನು 250 ಗ್ರಾಂ ಚಿನ್ನ ಹೆಚ್ಚಿನ ವರದಕ್ಷಿಣೆಯಾಗಿ ಕೊಡಿ ಎಂದು ಕೇಳಿದರು. ಆಗ ನಾನು ನನಗೆ ಇಷ್ಟೇ ಕೊಡುವುದಕ್ಕೆ ಸಾಧ್ಯವಿರುವುದು, ಇನ್ನು ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ಆಗ ಅವರು ನೋಡಿಕೋ ನೀನೇ ಕೊಡುತ್ತೀಯಾ ಎಂದು ಹೇಳಿದರು. ನಂತರ ಆರೋಪಿತರು ನನ್ನ ಮಗಳು ಪ್ರಾ ಸಾ 1 ರವರಿಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಸದರಿ ವಿಚಾರವನ್ನು ನನ್ನ ಮಗಳು ಪ್ರಾ ಸಾ 1 ರವರು ನನಗೆ ಕರೆ ಮಾಡಿ ತಿಳಿಸುತ್ತಿದ್ದಳು ಮತ್ತು ನಾನು ಆರೋಪಿತರ ಮನೆಗೆ ಹೋದಾಗ ತಿಳಿಯಿತು. ಸದರಿ ವಿಚಾರ ಯಜಮಾನರುಗಳಿಗೆ ತಿಳಿಸಿದರೆ ನಮ್ಮ ಮಾನ ಮಾರ್ಯಾದೆ ಹೋಗುತ್ತದೆ ಎಂದು ತಿಳಿಸಿರುವುದಿಲ್ಲ ಮತ್ತು ಪಂಚಾಯಿತಿ ಸೇರಿಸಿರುವುದಿಲ್ಲ. ಆ ಕಾರಣದಿಂದ ನನ್ನ ಮಗಳು ಪ್ರಾ ಸಾ 1 ರವರು 6 ತಿಂಗಳ ಕಾಲ ನಮ್ಮ ಮನೆಯಲ್ಲಿ ಇದ್ದಳು. ನಾವು ಪ್ರಾ ಸಾ 1 ರವರನ್ನು ವಿಚಾರಿಸಿದಾಗ ಆರೋಪಿತರು ಚಿನ್ನ ಒಡವೆಗಳನ್ನು ತೆಗೆದುಕೊಂಡು ಬಾ ಎಂದು ಕಳುಹಿಸಿರುತ್ತಾರೆ, ನಾನು ಪುನಃ ಹೋಗುವುದಿಲ್ಲವೆಂದು ಹೇಳುತ್ತಿದ್ದಳು.

4. ಆನಂತರ ಒಂದು ದಿವಸ ಬೆಳಿಗ್ಗೆ 10.00 ಗಂಟೆಗೆ 1 ನೇ ಆರೋಪಿ ನಮ್ಮ ಮನೆಗೆ ಬಂದು ಪ್ರಾ ಸಾ 1 ರವರನ್ನು ಮನೆಗೆ ಕಳುಹಿಸಿಕೊಡಿ ನಾನು ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ತಿಳಿಸಿದ,

ಆಗ ನಾನು ಮಾರನೇ ದಿನ ಬೆಳಿಗ್ಗೆ ನಾನೇ ಮನೆಗೆ ಕರೆದುಕೊಂಡು ಬರುತ್ತೇನೆ ಎಂದು ಆತನಿಗೆ ತಿಳಿಸಿದೆ. ಮಾರನೇ ದಿವಸ ಬೆಳಿಗ್ಗೆ ನಾನು, ನನ್ನ ಹೆಂಡತಿ ಪ್ರಾ ಸಾ 2 ರವರು ನನ್ನ ಮಗಳು ಪ್ರಾ ಸಾ 1 ರವರನ್ನು ಮಗುವಿನೊಂದಿಗೆ ಆರೋಪಿತರ ಮನೆಗೆ 10.00 ಗಂಟೆಗೆ ಕರೆದುಕೊಂಡು ಹೋದೆವು. ಆ ಸಮಯದಲ್ಲಿ ಮನೆಯಲ್ಲಿ 2 ನೇ ಆರೋಪಿ ಇದ್ದರು. ನಾವುಗಳು ಪ್ರಾ ಸಾ 1 ಮತ್ತು ಮೊಮ್ಮಗನನ್ನು ಆರೋಪಿತರ ಮನೆಯ ಒಳಗೆ ಕಳುಹಿಸಿ ನಾನು ಮತ್ತು ನನ್ನ ಹೆಂಡತಿ ಪಕ್ಕದಲ್ಲಿರುವ ನನ್ನ ಬಾಮೈದನನಾದ ನಾಗಲಿಂಗಯ್ಯನ ಮನೆಗೆ ಹೋದೆವು. ನಂತರ ಮಧ್ಯಾಹ್ನ 12.00 ಗಂಟೆಗೆ ಆರೋಪಿತರ ಮನೆಯಲ್ಲಿ ಗಲಾಟೆ ಶಬ್ದ ಕೇಳಿಸಿತು. ನಾನು ನನ್ನ ಹೆಂಡತಿ ಪ್ರಾ ಸಾ 2 ರವರು ಏನೋ ಗಲಾಟೆಯಾಗುತ್ತಿದೆ ಎಂದು ಆರೋಪಿತರ ಮನೆಗೆ ಹೋದೆವು. ನಾವು ಅಲ್ಲಿಗೆ ಹೋದಾಗ ಪ್ರಾ ಸಾ 1 ಅರುಚಿಕೊಂಡು ಮನೆಯಿಂದ ಹೊರಗೆ ಬಂದಳು. ಪ್ರಾ ಸಾ 1 ರವರ ಮೈಮೇಲೆ ಸೀಮೆಎಣ್ಣೆ ಎರಚಿದ್ದರು, ಅವಳ ಬಟ್ಟೆಯಲ್ಲಾ ಒದ್ದೆಯಾಗಿತ್ತು. ಇಬ್ಬರು ಆರೋಪಿಗಳು ಅಲ್ಲಿ ಇದ್ದರು. 1 ನೇ ಆರೋಪಿಯ ಅಕ್ಕ ಬಾವ ಮನೆಯ ಹಿಂದಿನ ಬಾಗಿಲಿನಿಂದ ಹೊರಟು ಹೋದರು. ಆರೋಪಿಗಳು ಪ್ರಾ ಸಾ 1 ರವರ ಮೇಲೆ ಸೀಮೆಎಣ್ಣೆ ಎರಚಿ ಬೆಂಕಿಕಡ್ಡಿ ಗೀರಲು ಪ್ರಯತ್ನಪಟ್ಟರು, ಆಗ ನಾನು ಓಡಿ ಬಂದಿರುತ್ತೇನೆ ಎಂದು ಪ್ರಾ ಸಾ1 ರವರು ತಿಳಿಸಿದರು. ನಂತರ ನಾನು ಪ್ರಾ ಸಾ 1 ರವರನ್ನು ಮಳವಳ್ಳಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಮಧ್ಯಾಹ್ನ 1.00 ರಿಂದ 1.30 ಆಗಿತ್ತು. ಗಲಾಟೆಯಾಗುವ ಸಮಯದಲ್ಲಿ ಆರೋಪಿಗಳ ಮನೆಯ ಬಳಿ ಅವರ ಗ್ರಾಮಸ್ಥರು ಸೇರಿದ್ದರು, ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಮಗಳು ಪ್ರಾ ಸಾ 1 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ಪೊಲೀಸರವರು ನನ್ನ ಹೇಳಿಕೆಯನ್ನು ಮಾಡಿಕೊಂಡಿರುವುದಿಲ್ಲ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಎಂ ವಿ ಆರ್ ವಕೀಲರಿಂದಃ

5. ಆರೋಪಿಗಳ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ,

(ರವೀಂದ್ರ.ಆರ್.)
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.